ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1095/2024
ಸಿ.ಡಬ್ಲ್ಯು 8 ಪಿ.ಡಬ್ಲೂ : 7

| | |
|---|---|
| ಸಾಕ್ಷಿದಾರರ ಹೆಸರು | ಮಹಮ್ಮದ್ ಹಾಶಿಮ್ |
| ತಂದೆಯ ಹೆಸರು | ಶೌಕತ್ ಅಲಿ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಜೀವನ |
| ವಾಸಸ್ಥಳ | ಮುಂಬೈ |

ದಿನಾಂಕಃ 05-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ 12 ರವರ ಪರಿಚಯ ಇದೆ. ಸಾಕ್ಷಿ ಮುಂದುವರಿದು ಅವರು ಮಾನಸಿಕವಾಗಿ ಅಸ್ವಸ್ಥರಾಗಿರುತ್ತಾರೆ. ಚಾಸಾ 1 ನನ್ನ ತಂಗಿ, 1 ನೇ ಆರೋಪಿತರು ನನಗೆ ಪರಿಚಯಸ್ಥರು. ಚಾಸಾ 1 ಮತ್ತು 1 ನೇ ಆರೋಪಿತರ ನಡುವೆ ದಿನಾಂಕ ನೆನಪಿರುವುದಿಲ್ಲ ಆದರೆ ಸದ್ರಿ ಮದುವೆ 1996-97 ನಡುವೆ ಆಗಿರುತ್ತದೆ. ಸದ್ರಿ ಮದುವೆ ಮುಂಬೈನಲ್ಲಿರುವ ಚೀತಾ ಕ್ಯಾಂಪ್ ನಲ್ಲಿ ರೂಮ್ ನಂಬ್ರ 5 ರಲ್ಲಿ ನಡೆದಿರುತ್ತದೆ. ಮದುವೆ ಆದ ಸ್ವಲ್ಪ ದಿನದ ನಂತರ ಚಾಸಾ 1 ನನಗೆ ಕರೆ ಮಾಡಿ ಆರೋಪಿತರು ನೀಡುತ್ತಿದ್ದ ಹಿಂಸೆ ಮತ್ತು ಕೆಟ್ಟ ನಡವಳಿಕೆ ಬಗ್ಗೆ ಮಾಹಿತಿ ನೀಡುತ್ತಿದ್ದರು. ಚಾಸಾ 1 ರವರ ಮೊದಲ ಗಂಡನ ಮಕ್ಕಳಿಗೆ ಕಿರುಕುಳ ನೀಡುತ್ತಿದ್ದ ಮತ್ತು ಹೊಡೆದು ಬಡಿದು ಮಾಡುತ್ತಿದ್ದ ಬಗ್ಗೆ ನನಗೆ ತಿಳಿಸುತ್ತಿದ್ದರು.

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿದ್ದು ಅದು ಮಹಜರಾಗಿರುತ್ತದೆ. ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ.12 ಬಿ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ 2013 ರ ಅಕ್ಟೋಬರ್ ತಿಂಗಳಲ್ಲಿ ಸಹಿ ಮಾಡಿರುತ್ತೇನೆ.

ಸದ್ರಿ ದಾಖಲೆಗೆ ನಾನು ಮುಂಬೈನಲ್ಲಿರುವ ಚೀತಾ ಕ್ಯಾಂಪ್ ನಲ್ಲಿ ರೂಮ್ ನಂಬ್ರ 5 ರಲ್ಲಿ ಮಹಜರು ಕಾಲಕ್ಕೆ ಬೆಳಿಗ್ಗೆ 10-15 ರಿಂದ 11.00 ಗಂಟೆಯ ಸಮಯದಲ್ಲಿ ನನ್ನ ಸಹಿ ಹಾಕಿರುತ್ತೇನೆ. ಸದ್ರಿ ಸ್ಥಳದಲ್ಲಿ ಆರೋಪಿ ಮತ್ತು ಚಾಸಾ1 ರವರ ನಡುವೆ ದಿನನಿತ್ಯ ಜಗಳ ಆಗುತ್ತಿತ್ತು ಎಂದು ಚಾಸಾ 1ರವರು ನನಗೆ ತಿಳಿಸಿರುತ್ತಾರೆ ಮತ್ತು ಸದ್ರಿ ಜಾಗವನ್ನು ಮಹಜರು ಕಾಲಕ್ಕೆ ಚಾಸಾ 1ರವರು ತೋರಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ. ಕೆ. ಎಸ್ ವಕೀಲರಿಂದಃ**

ನಾನು ಚಾಸಾ 1ರವರ ಕಿರಿಯ ಸಹೋದರ. ನಾವು 4 ಜನ ಸಹೋದರರು ಮತ್ತು 3 ಸಹೋದರಿಯರು ಇದ್ದೆವು. ಮದುವೆಯಾಗುವ ಮುಂಚೆ ಆರೋಪಿಯ ಮನೆಗೆ ಬೇಟಿ ನೀಡಿ ಮಾಹಿತಿ ಪಡೆದುಕೊಂಡಿರುವುದಿಲ್ಲ. ಆರೋಪಿತರಿಗೆ ಎಷ್ಟು ಜನ ಸಹೋದರರು ಮತ್ತು ಸಹೋದರಿಯರು ಎಂದು ನನಗೆ ಗೊತ್ತಿಲ್ಲ. ಆರೋಪಿತರಿಗೆ ಮದುವೆಯಾಗುವ ಸಮಯದಲ್ಲಿ ಅವರ ತಂದೆ ತಾಯಿ ಜೀವಂತ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆರೋಪಿತರನ್ನು ಬಿಟ್ಟು ಬೇರೆ ಯಾರು ನನಗೆ ಪರಿಚಯ ಇಲ್ಲ. ಮದುವೆ ಸಮಯದಲ್ಲಿ ಆರೋಪಿತರ ಕಡೆಯಿಂದ ಯಾರು ಬಂದಿದ್ದರು ನನಗೆ ಗೊತ್ತಿಲ್ಲ.

ಆರೋಪಿತರ ಮತ್ತು ಚಾಸಾ 1ರವರ ನಡುವೆ ಯಾವುದೇ ರೀತಿಯ ಮದುವೆ ಆಗಿಲ್ಲ ಎಂದರೆ ಸರಿಯಲ್ಲ. ಮಹಜರು ಮಾಡುವ ಸಮಯದಲ್ಲಿ ನಾನು ಸಹಿ ಮಾಡಿ ಸ್ಥಳ ಬಿಟ್ಟಿರುತ್ತೇನೆ. ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರನ್ನು ರೂಮ್ ನಂಬ್ರ 5ರಲ್ಲಿ ಮಾಡಲೇ ಇಲ್ಲ ಮತ್ತು ನಾನು ಅದಕ್ಕೆ ಸಹಿ ಮಾಡಲಿಲ್ಲ ಎಂದರೆ ಸರಿಯಲ್ಲ.

ಚಾಸಾ 1 ಮತ್ತು ಆರೋಪಿತರ ನಡುವೆ ಮದುವೆ ಆಗಲಿಲ್ಲ, ಚಾಸಾ 1ರವರು ಕರೆ ಮಾಡಿ ಯಾವುದೇ ಮಾಹಿತಿ ನೀಡಲಿಲ್ಲ ಮತ್ತು ಅವರು ಜೊತೆಗೆ ವೈವಾಹಿಕ ಜೀವನ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮ್ಯು ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಮತ್ತು ಇದೇ ಮೊದಲ ಬಾರಿ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1ರವರು ದಾಖಲಿಸಿರುವ ಸುಳ್ಳು ಪ್ರಕರಣದಲ್ಲಿ ಅವಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1ರವರ 1ನೇ ಗಂಡನ ಮಕ್ಕಳಿಗೆ ಹೊಡೆದು ಬಡಿದು ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸಿನವರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.